ಎನ್ನುವುದು ಸ್ಪಷ್ಟವಿದೆ. ಹಾಗಾಗಿ ಅಬ್ದಲ್ಲಾ 'ನೀನು ನನ್ನನ್ನು ಪ್ರೀತಿಸುತ್ತೀಯಾ' ಎಂದು ಇದ್ದಕ್ಕಿದ್ದಂತೆ ಒಂದು ದಿನ ಕೇಳಿದಾಗ, ಅವಳು ಒಂದು ಕ್ಷಣ ಥಕ್ಕಾಗಿ, ಮರುಕ್ಷಣವೇ ಬಿಕ್ಕಿಬಿರಿದು ನಕ್ಕು ಬಿಡುತ್ತಾಳೆ. ಆ ನಗು ಎಷ್ಟು ಹರಿತವಾಗಿತ್ತು, ತೀವ್ರವಾದ ಭಾವದಿಂದ ಕೂಡಿತ್ತು ಎಂದರೆ ಅಬ್ದಲ್ಲಾಗೆ ಅದನ್ನು ಎದುರಿಸುವುದಕ್ಕೆ, ಸಹಿಸುವುದಕ್ಕೆ ಕಷ್ಟವಾಗುತ್ತದೆ. ಆಸ್ಮಾ, ಮದುವೆಯಾಗುವ ಖಲೀದ್ ಒಬ್ಬ ಚಿತ್ರಕಾರ. ಆದರೆ ಅವನೇಕೆ ಚಿತ್ರಕಾರನಾದ ಎಂದರೆ ಅದಕ್ಕೊಂದು ಭಯಂಕರವಾದ ಕತೆಯಿದೆ. ಮನುಷ್ಯನಿಗೆ ಕಲೆ ಏಕೆ ಬೇಕು ಎನ್ನುವುದಕ್ಕೆ ಅವನದೇ ಆದ ಒಂದು ಉತ್ತರವಿದೆ. ಅದರಲ್ಲಿ ಅಪಾರವಾದ ನೋವಿದೆ, ಸಂಕಟವಿದೆ. ಆದರೆ ಪುಸ್ತಕಗಳಲ್ಲಿ ಮುಳುಗುವ, ಸದಾ ಕವನಗಳನ್ನು ಓದುವ ಆಸ್ಮಾಗೆ ಈ ಭಾವತಲ್ಲಣವನ್ನು ತಲುಪುವುದು ಸಾಧ್ಯವಾಗುವುದೇ? ಗೊತ್ತಿಲ್ಲ. ಇನ್ನು ಬಾಲ್ಯದ ಯಾವುದೋ ಹುಡುಗಾಟದ ಮಾತಿಗೆ ಜೋತು ಬಿದ್ದು ನಾಸಿರನೇ ತನ್ನ ಗಂಡ, ತಾನು ಅವನಿಗಲ್ಲದೆ ಇನ್ಯಾರಿಗೂ ಸಲ್ಲತಕ್ಕವಳಲ್ಲ ಎಂದು ವ್ರತದಂತೆ ತನ್ನ ಇಡೀ ಬಾಳನ್ನು ಬದುಕುವ ಖಾವ್ಲಾಗೆ ದಕ್ಕುವುದಾದರೂ ಏನು? ಅನ್ಯಮನಸ್ಕನಂತೆ ಖಾವ್ಲಾಳನ್ನು ಬಳಸಿಕೊಳ್ಳುವ, ಕೆನಡಾದಲ್ಲಿ ಅದಾಗಲೇ ಒಬ್ಬ ಪತ್ನಿಯಿರುವ ನಾಸಿರನ ನಯವಂಚನೆ, ದ್ರೋಹ. ಮಾಯಾಗೆ ಒಬ್ಬಳು ಮಗಳಿದ್ದಾಳೆ. ಅವಳ ಹೆಸರು ಲಂಡನ್. ವೈದ್ಯೆ. ಆದರೂ ಮೋಹಪರವಶಳಂತೆ ಹುಚ್ಚಾಗಿ ಅಹ್ಮದ್ ಎಂಬಾತನನ್ನು ಪ್ರೀತಿಸುವ ಲಂಡನ್‌ಗೆ ಸಿಕ್ಕಿದ್ದೇನು? ಹಾಗೆಯೇ ಈ ಮೂವರು ಹೆಮ್ಮಕ್ಕಳ ತಾಯಿ ಸಲೀಮಾಳ ಕತೆಯೂ ದುರಂತಮಯವೇ ಆಗಿದೆ. ಅನಾಥೆಯಂತೆ, ಸರಿಸುಮಾರು ಗುಲಾಮಿ ಹೆಣ್ಣಿನಂತೆ ಬೆಳೆದ ಸಲೀಮಾ ಈ ಅಝಾನ್‌ನನ್ನು ಕಟ್ಟಿಕೊಂಡಿದ್ದು ಒತ್ತಡದಲ್ಲಿ, ಬಲವಂತದ ಮದುವೆಯಲ್ಲಿ. ಮೂವರು ಹೆಮ್ಮಕ್ಕಳನ್ನು ಅವಳು ಬೆಳೆಸಲು, ಅವರ ಮದುವೆ ಮಾಡಲು, ತನ್ನ ಗಂಡನನ್ನು ನಝಿಯಾಳಿಂದ ಬಿಡಿಸಿಕೊಳ್ಳಲು, ಹೆತ್ತು ಸತ್ತ ಇಬ್ಬರು ಗಂಡು ಮಕ್ಕಳ ಸಾವಿನ ನೋವು ಮರೆಯಲು ಅವಳು ಏನೇನು ಮಾಡಲಿಲ್ಲ? ಆದರೆ ಆ ದಾಂಪತ್ಯ ಸುಖದ್ದೆ? ನೆಮ್ಮದಿ ತಂದಿತ್ತೆ? ತನ್ನ ಮಗಳಿಗೆ ವಿಚಿತ್ರವಾದ ಲಂಡನ್ ಎಂಬ ಹೆಸರಿಡುವ, ಅವಳ ಪ್ರೇಮ–ವೈಫಲ್ಯ–ವಿಚ್ಛೇದನ ಎಲ್ಲವನ್ನೂ ಸಹಿಸುವ, ಒಬ್ಬ ಮಗನ ಮನೋವೈಕಲ್ಯವನ್ನು ಅರಗಿಸಿಕೊಂಡೂ ಮೌನ ಮತ್ತು ನಿದ್ದೆಯೊಂದಿಗೆ ಬದುಕನ್ನು ಎದುರಿಸುವ ಮಾಯಾಳ ಅಂತರಂಗವೇನಿತ್ತು? ಅಬ್ದಲ್ಲಾ ಜೊತೆ ಅದೇಕೆ ಸಂತುಲಿತ ದಾಂಪತ್ಯ ಸಾಧ್ಯವಾಗಲಿಲ್ಲ? ಅಥವಾ ಇದ್ದುದರಲ್ಲಿ ನಿಜಕ್ಕೂ ಅವರದ್ದೇ ಸಂತುಲಿತ ದಾಂಪತ್ಯವಾಗಿತ್ತೆ? ಇದ್ದುದರಲ್ಲಿ ರೊಮ್ಯಾಂಟಿಕ್ ಆಗಿ ಕಾಣುವ, ಅಲ್ಪಾಯುವಾದ ಜಡ್ಜ್ ಯೂಸುಫ್ ಮತ್ತು ಮರಿಯಮ್ಮರ ದಾಂಪತ್ಯದ ಚಿತ್ರವೂ ಇಲ್ಲಿದೆ. ಇದು ಒಟ್ಟಾರೆಯಾಗಿ ಮನುಷ್ಯ ಸಂಬಂಧಗಳ, ಗಂಡು ಹೆಣ್ಣು ಸಂಬಂಧಗಳ ಕತೆಯೆ?

> ಮನುಷ್ಯ ಸಂಬಂಧಗಳ ತಾಕಲಾಟ, ಮನಸ್ಸಿನ ತೊಳಲಾಟ, ಹಪಹಪಿಕೆಗಳು, ಭೌತಿಕ ಜಗತ್ತು ಒಡ್ಡುವ ಆಸೆ, ಈ ಕಾದಂಬರಿಯಲ್ಲಿ ಮುಖಾಮುಖಿಯಾಗುವ ಬಗೆ ಅನನ್ಯವಾಗಿದೆ.

ಒಂದೊಂದೇ ಪಾತ್ರಗಳ ಹೆಸರಿನಲ್ಲಿ ಬರುವ ಅಧ್ಯಾಯಗಳಲ್ಲಿ ಕೆಲವೊಮ್ಮೆ ಉತ್ತಮಪುರುಷ ನಿರೂಪಣೆಯಿದ್ದರೆ ಕೆಲವೆಡೆ ಪ್ರಥಮ ಪುರುಷ ನಿರೂಪಣೆ ಇದೆ. ಕಥಾನಕದ ಕುತೂಹಲವನ್ನು ಕಾಯ್ದುಕೊಳ್ಳಲು ಘಟನೆಗಳನ್ನು ಹಿಂದುಮುಂದಾಗಿ ಜೋಡಿಸಿದಂತೆ ನಿರೂಪಣೆ ಸಾಗುತ್ತದೆ.